# ಶ್ರೀರಾಮಕೃಷ್ಣ ಪರಂಪರೆಯಲ್ಲಿ 'ಜಗನ್ಮಾತೆ'

ಮೀನಾ ವಿ.

**ಮಾ**ನವ ಜೀವನದಲ್ಲಿ 'ತಾಯಿ'ಯ ಸ್ಥಾನ ಅತ್ಯಂತ ಶ್ರೇಷ್ಠವಾದದ್ದು. ಅತಿ ಚಿಕ್ಕ ವಯಸ್ಸಿನಿಂದಲೂ ನಮ್ಮ ಎಲ್ಲಾ ಅಪರಾಧಗಳನ್ನೂ ಸಹಿಸಿ ನಮ್ಮನ್ನು ಪ್ರೀತಿಯಿಂದ ಮನುಷ್ಯರನ್ನಾಗಿ ಮಾಡಿ, ನಮ್ಮ ಸರ್ವತೋಮುಖ ಏಳಿಗೆಗಾಗಿ ಸದಾ ಶ್ರಮಿಸುವ ನಿಃಸ್ವಾರ್ಥ ಪ್ರೇಮಮಯಿಯಾದ 'ತಾಯಿ'ಯನ್ನು ಯಾರು ಮರೆಯಬಲ್ಲರು? ಭಗವಂತನ ಅಹೇತುಕಕೃಪೆಯೇ ತಾಯಿಯ ರೂಪದಲ್ಲಿರುತ್ತದೆ. ಆದ್ದರಿಂದಲೇ ಪೂಜ್ಯರಾದ ಸ್ವಾಮಿ ವಿವೇಕಾನಂದರು "ತಾಯಿಯನ್ನು ಗೌರವಿಸದ ಯಾವ ವ್ಯಕ್ತಿಯೂ ದೊಡ್ಡವನಾಗಲಾರ" ಎಂದಿದ್ದಾರೆ. ಭಾರತದಲ್ಲಿ ಮಾತೆಯನ್ನು ಪರದೈವವೆಂದೇ ಕಾಣುವುದುಂಟು. ಇಂತಹ ದಿವ್ಯ ಮಾತೃಮೂರ್ತಿ ಅಧ್ಯಾತ್ಮ ಜೀವನದ ಗುರಿಯಾದಾಗ ಸಾಧಕನ ಉತ್ಸಾಹಕ್ಕೆ ಆನಂದಕ್ಕೆ ಎಣೆಯುಂಟೇ? ಭಾರತದಲ್ಲೇ ಅಲ್ಲದೆ ಪ್ರಪಂಚದ ಅನೇಕ ಕಡೆಗಳಲ್ಲಿ 'ಜಗನ್ಮಾತೆ'ಯ ಆರಾಧನೆ ನಡೆಯುತ್ತಿದೆ.



ವೇದಗಳ ಕಾಲದಲ್ಲಿ ದೇವಮಾತೆಯಾದ 'ಅದಿತಿ'ಯ ಪೂಜೆ ಉಕ್ತವಾಗಿದೆ. ಆಕೆ ಕೇವಲ ದೇವಮಾತೆಯಲ್ಲದೆ ಜಗತ್ತಿನ ತಾಯಿಯೂ ಆಗಿದ್ದಾಳೆ. ಇದರ ಬಗೆಗೆ ಪುರಾಣಗಳಲ್ಲೂ ಹೇಳಿದೆ. ಆದರೆ 'ಅದಿತಿ' ಬಹುಪ್ರಖ್ಯಾತಳಾದ ಜಗನ್ಮಾತೆಯಾಗಲಿಲ್ಲ. ಅನಂತರ 'ಭೂಮಿತಾಯಿ' ಯನ್ನೇ ಜಗನ್ಮಾತೆಯೆಂದು ಪೂಜಿಸಲಾಗುತ್ತಿತ್ತು. 'ನಮ್ಮ ಭೂಮಿತಾಯಿ ದೊಡ್ಡವಳು' ಎಂದು ಋಗ್ವೇದದಲ್ಲಿ ಹೇಳಿದೆ. ರಾಮಾಯಣದಲ್ಲಿ ಸೀತಾದೇವಿಯು ಭೂಮಿತಾಯಿಯ ಮಗಳೆಂಬ ಪ್ರಸ್ತಾಪ ಇದೆ. ಉಪನಿಷತ್ತುಗಳು ಮತ್ತು ಪುರಾಣಗಳಲ್ಲಿ ಭೂಮಿಯನ್ನು ಶ್ರೀದೇವಿಯೆಂದೂ ಭೂದೇವಿಯೆಂದೂ ಕರೆದಿದ್ದಾರೆ.

ಲೇಖಕಿ ಬೆಂಗಳೂರು ರಾಮಕೃಷ್ಣ ಮಠದ ಭಕ್ತರು. ಇವರ ಹಲವು ಲೇಖನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಇವರು ಬಂಗಾಳಿ ಭಾಷೆಯಲ್ಲಿ ನುರಿತವರು.

ಬಂಗಾಳದಲ್ಲಿ ದುರ್ಗಾದೇವಿಯನ್ನೇ ಜಗನ್ಮಾತೆ ಎಂದು ಪೂಜಿಸಲಾಗುತ್ತದೆ. ಆಕೆಗೆ ಉಮಾ, ಕಾತ್ಯಾಯನಿ, ಶಾಂಕರೀ, ಅನ್ನಪೂರ್ಣಾ, ಚಂಡೀ, ಭ್ರಾಮರೀ, ಗೌರೀ ಎಂಬ ಅನೇಕ ಹೆಸರುಗಳುಂಟು. ದೇವಿಯ ಪೂಜೆಯೂ ಒಂದು ರೀತಿಯಲ್ಲಿ ಭೂಮಿತಾಯಿಯ ಪೂಜೆಯೇ ಆಗಿದೆ.

ಅನಂತರ ಭಾರತದಲ್ಲಿ ನದಿಗಳನ್ನು ಪೂಜಿಸುವುದನ್ನು ನೋಡುತ್ತೇವೆ. ಅದರಲ್ಲಿ ಮುಖ್ಯವಾಗಿ ಸರಸ್ವತೀ ದೇವಿಯನ್ನು ದೇವತೆಯಾಗಿ, ನದಿಯಾಗಿ, ತಾಯಿಯಾಗಿಯೂ ಪೂಜಿಸುತ್ತೇವೆ. ಗಂಗೆ, ಯಮುನೆ ಮುಂತಾದ ನದಿಗಳೆಲ್ಲಾ ಪವಿತ್ರವಾದವುಗಳು. ಅವುಗಳನ್ನು ಪೂಜಿಸಿದರೆ ಶಾಂತಿ, ಮುಕ್ತಿ ಪಡೆಯುತ್ತೇವೆ ಎಂಬ ಭಾವ ಪುರಾಣಗಳಲ್ಲಿ ಇದೆ. ಋಗ್ವೇದದ ಒಂದು ಶ್ಲೋಕದಲ್ಲಿ ಸರಸ್ವತಿಯನ್ನು ತಾಯಿಯರಲ್ಲಿ ಉತ್ತಮಳೆಂದೂ ನದಿಗಳಲ್ಲಿ ಶ್ರೇಷ್ಠಳೆಂದೂ ದೇವಿಯರಲ್ಲಿ ಉನ್ನತಳೆಂದೂ ಸ್ತುತಿಸಲಾಗಿದೆ. ಟಿಬೆಟ್, ಜಾವಾ, ಜಪಾನಿನಲ್ಲೂ ಸರಸ್ವತೀದೇವಿಯ ಮೂರ್ತಿಗಳು ಕಂಡುಬಂದಿವೆ. ಅದರಿಂದ ಅಲ್ಲಿಯೂ ಆಕೆಯ ಪೂಜೆ ಇತ್ತೆಂದು ತಿಳಿದುಬರುತ್ತದೆ. ಸರಸ್ವತಿಯನ್ನು ಸಾಧಾರಣವಾಗಿ ಶ್ವೇತವಸ್ತ್ರಧಾರಿಣಿಯಾಗಿಯೂ, ಶ್ವೇತಾಲಂಕಾರಭೂಷಿತೆಯಾಗಿಯೂ ಹಾಗೂ ಆಕೆಗೆ ಸಂಬಂಧಪಟ್ಟ ಪ್ರತಿಯೊಂದೂ ಶ್ವೇತಬಣ್ಣದ್ದೆಂದೂ ಸ್ತುತಿಸಿದ್ದಾರೆ; ಸಾವಿತ್ರಿ, ಗಾಯತ್ರೀ, ವಾಗ್‌ವಾದಿನಿ, ಭಾರತಿ ಮುಂತಾದ ಹೆಸರುಗಳಲ್ಲಿ ಆಕೆಯನ್ನು ಕರೆಯುತ್ತಾರೆ.

ಮಾರ್ಕಂಡೇಯ ಪುರಾಣದಲ್ಲಿ ಬರುವ ಸಪ್ತಶತೀ ಅಥವಾ ಚಂಡಿಯಲ್ಲಿ ದೇವಿಯ ಮಹಾತ್ಮೆಯನ್ನು ವಿಸ್ತಾರವಾಗಿ ವರ್ಣಿಸಿದೆ. ಇಲ್ಲಿ ಪರಾಶಕ್ತಿಯನ್ನು ದುರ್ಗಾ, ಚಂಡೀ, ಲಕ್ಷ್ಮೀ, ಸರಸ್ವತೀ ಎಂದು ಹಲವಾರು ಹೆಸರುಗಳಲ್ಲಿ ಕರೆದಿದ್ದಾರೆ. ಎಲ್ಲ ಕಷ್ಟಗಳ ನಿವಾರಣೆಗಾಗಿ ಈ ಸಪ್ತಶತೀ ಪಾರಾಯಣ ಶ್ರೇಷ್ಠವೆಂದು

ಹೇಳಿದೆ. ದೇವೀಕವಚದಲ್ಲಿ ನವದುರ್ಗೆಯರ ಬಗೆಗೆ ಹೇಳಿದೆ. ಅವರೆಂದರೆ ಶೈಲಪುತ್ರಿ, ಬ್ರಹ್ಮಚಾರಿಣಿ, ಚಂದ್ರಘಂಟಾ, ಕೂಷ್ಮಾಂಡಾ, ಸ್ಕಂದಮಾತಾ, ಕಾತ್ಯಾಯನಿ, ಕಾಳರಾತ್ರಿ, ಮಹಾಗೌರಿ ಹಾಗೂ ಸಿದ್ಧೇಶ್ವರಿ. ಭಾರತದಲ್ಲಿ ೫೧ ಶಕ್ತಿಪೀಠಗಳನ್ನು ಕಾಣುತ್ತೇವೆ. ದಕ್ಷಪ್ರಜಾಪತಿಯ ಮಗಳಾದ ಸತಿ, ತನ್ನ ಪತಿ ಶಿವನ ನಿಂದೆಯನ್ನು ತಾಳಲಾರದೆ ಯಜ್ಞಕುಂಡದಲ್ಲಿ ಬಿದ್ದು ಶರೀರ ತ್ಯಾಗ ಮಾಡಿದಾಗ, ಆಕೆಯ ಅಗಲುವಿಕೆಯನ್ನು ತಾಳಲಾರದೆ ಶಿವನು ತನ್ನ ಹೆಗಲ ಮೇಲೆ ಆಕೆಯ ಶರೀರವನ್ನು ಹೊತ್ತು ತಿರುಗುತ್ತಿರಲು, ಸೃಷ್ಟಿಯು ಅಲ್ಲೋಲಕಲ್ಲೋಲವಾಗತೊಡಗಿ, ಮಹಾವಿಷ್ಣು ತನ್ನ ಸುದರ್ಶನ ಚಕ್ರದಿಂದ ಆಕೆಯ ಶರೀರವನ್ನು ಚೂರು ಚೂರು ಮಾಡಿದಾಗ ಅದು ಭಾರತದ ವಿವಿಧ ಸ್ಥಾನಗಳಲ್ಲಿ ಬಿದ್ದು ೫೧ ಶಕ್ತಿಪೀಠಗಳಾಯಿತೆಂದು ಪುರಾಣಗಳು ಹೇಳುತ್ತವೆ.

ದೇವಿ ಸತಿಯ ಬಗ್ಗೆ ಇನ್ನೊಂದು ಐತಿಹ್ಯವೂ ಇದೆ. ಆಕೆ ತನ್ನ ತಂದೆ ಮಾಡುತ್ತಿದ್ದ ಯಜ್ಞಕ್ಕೆ ಹೋಗಲು ಶಿವನ ಅನುಮತಿ ಬೇಡುವಾಗ ಆತನಿಗೆ ತನ್ನ ಹತ್ತು ರೂಪಗಳನ್ನು ತೋರಿದಳಂತೆ. ಆ ಹತ್ತು ದೇವಿಯರನ್ನು ದಶಮಹಾವಿದ್ಯೆಯರೆಂದು ಕರೆಯಲಾಗಿದೆ. ತಾರಾ, ಕಾಲೀ, ಷೋಡಶೀ, ಭುವನೇಶ್ವರಿ, ಭೈರವೀ, ಛಿನ್ನಮಸ್ತಾ, ಧೂಮವತೀ, ಬಗಲಾ, ಮಾತಂಗೀ ಮತ್ತು ಕಮಲಾ ಎಂಬುದು ಈ ದಶಮಹಾವಿದ್ಯೆಯರ ಹೆಸರುಗಳು.

## ಶ್ರೀರಾಮಕೃಷ್ಣರ 'ಅಮ್ಮ'

ಶ್ರೀರಾಮಕೃಷ್ಣರ ಇಷ್ಟದೇವತೆಯಾದ ಮಹಾಕಾಳಿ ಅವರಿಗೆ ಬ್ರಹ್ಮನ ಶಕ್ತಿಯೇ ಆಗಿದ್ದಳು. ಅವರು ಜಗನ್ಮಾತೆಯನ್ನು ನಿರಾಕಾರವಾಗಿ, ಸಾಕಾರವಾಗಿ, ಗುಣಮಯಿಯಾಗಿ, ಗುಣಾತೀತೆಯಾಗಿ, ಮೃಣ್ಮಯಿಯಾಗಿ, ಚಿನ್ಮಯಿಯಾಗಿ – ಹೀಗೆ ಎಲ್ಲಾ ರೀತಿಯಲ್ಲೂ ಪೂಜಿಸಿದರು. ಜಗನ್ಮಾತೆಯಲ್ಲಿ ಸಂಪೂರ್ಣ ಶರಣಾಗತಿಯನ್ನು ಹೊಂದಲು ಅವರು ಉಪದೇಶಿಸುತ್ತಿದ್ದರು ಹಾಗೂ ಭಗವತಿಯಲ್ಲಿ ಶುದ್ಧ ಭಕ್ತಿಗಾಗಿ ಪ್ರಾರ್ಥಿಸಲು ಹೇಳುತ್ತಿದ್ದರು. ಒಂದು ಹಾಡಿನಲ್ಲಿ, "ತೆಗೆದುಕೊ ನಿನ್ನ ಶುಚಿಯನ್ನು, ತೆಗೆದುಕೊ ನಿನ್ನ ಅಶುಚಿಯನ್ನು, ನನಗೆ ಶುದ್ಧ ಭಕ್ತಿಯನ್ನು ಮಾತ್ರ ನೀಡು, ಭವತಾರಿಣೀ; ಧರ್ಮ ಅಧರ್ಮಗಳನ್ನು ತೆಗೆದುಕೊ, ಕೇವಲ ಶುದ್ಧಭಕ್ತಿಯನ್ನು ಮಾತ್ರ ನೀಡು" ಎಂದು ಬೇಡುತ್ತಾರೆ. ಅವರ ದಿವ್ಯ ಜೀವನವನ್ನು ಓದಿದ ಯಾರಿಗೇ ಆಗಲಿ, ಮಾತೃಭಕ್ತಿ ಉಂಟಾಗದಿರುವುದಿಲ್ಲ. ಜಗನ್ಮಾತೆಯೊಂದಿಗೆ ಅವರಿಗೆ ಅತ್ಯಂತ ಶುದ್ಧವಾದ, ಸರಳವಾದ, ನಿಕಟವಾದ, ಅಹೇತುಕವಾದ ಪ್ರೇಮ ಇತ್ತು. "ನನಗೆ ಜೀವನದಲ್ಲಿ ಯಾರೂ ಬೇಡ, ನೀನೊಬ್ಬಳು ಇದ್ದರೆ ಸಾಕು" ಎಂದು ಅವರು ಆಕೆಯನ್ನು ಪ್ರಾರ್ಥಿಸುತ್ತಾರೆ.

ಜಗನ್ಮಾತೆಯ ಮಾರ್ಗದರ್ಶನದಲ್ಲಿ ಎಂಥ ರೋಮಾಂಚಕಾರಿ ಅಧ್ಯಾತ್ಮ ಸಾಧನೆಯ ಮೆಟ್ಟಿಲುಗಳನ್ನು ಅವರು ಏರಿದರೆಂದರೆ ಅದು 'ನ ಭೂತೋ ನ ಭವಿಷ್ಯತಿ' ಎಂದರೆ ತಪ್ಪಾಗಲಾರದು. ತಂತ್ರಸಾಧನೆ, ವೈಷ್ಣವ ಸಾಧನೆ, ಅದ್ವೈತ ಸಾಧನೆ ಮೊದಲಾದ ಎಲ್ಲಾ ಸಾಧನೆಗಳ ತುತ್ತತುದಿಯನ್ನು ಅವರು ಮುಟ್ಟಿದರು. ಜಗನ್ಮಾತೆ ಕಳುಹಿಸಿದ ಎಲ್ಲಾ ಗುರುಗಳನ್ನೂ ಒಪ್ಪಿದರು. ಆಕೆಯಿಂದ ತೋರಿಸಲ್ಪಟ್ಟ ಎಲ್ಲಾ ಶಿಷ್ಯಸಂತಾನಕ್ಕೂ ಸಿದ್ಧಿಯನ್ನು ಕರುಣಿಸಿದರು. ಜಗನ್ಮಾತೆಯೆ ಅವರಿಗೆ ಸರ್ವಸ್ವವೂ ಆಗಿದ್ದಳು. ಅವರು ದಕ್ಷಿಣೇಶ್ವರದ ಕಾಳೀ ದೇವಾಲಯದಲ್ಲಿ ಮಾತ್ರ ಭವತಾರಿಣಿಯನ್ನು ಕಂಡವರಲ್ಲ; ಸರ್ವಭೂತಗಳಲ್ಲೂ ಜಗನ್ಮಾತೆಯನ್ನು ಕಂಡರು. ತಮ್ಮ ತಾಯಿ ಚಂದ್ರಮಣಿಯಲ್ಲಿ, ಸಾಧ್ವಿ ಸತಿ ಶಾರದಾಮಣಿಯಲ್ಲಿ, ಅಸಾಧು ಚಾರಿತ್ರ್ಯಳಾದ ರಮಣಿಯಲ್ಲಿ ಕೂಡ, ಬೆಕ್ಕಿನಲ್ಲಿ, ದಿಕ್ಕುದಿಕ್ಕಿನಲ್ಲಿ ಎಲ್ಲೆಲ್ಲಿಯೂ ಅವರು ಜಗನ್ಮಾತೆಯನ್ನೇ ಕಂಡರು. ಅದೊಂದು ಅಪೂರ್ವ ನೋಟ! ಕಡೆಗೆ ತಾವೇ ಜಗನ್ಮಾತೆಯ ಆಲಯವಾದರು. ಮೃಣ್ಮಯೀ ದೇವಿ ಬರಿ ಕಲ್ಲೇ ಅಥವಾ ಉಸಿರಾಡುವವಳೇ ಎಂದು ಆಕೆಯ ಮೂಗಿನ ಬಳಿ ಹತ್ತಿಯಿಟ್ಟು ನೋಡುತ್ತಾರೆ. ಆಕೆ ಉಸಿರಾಡುತ್ತಿದ್ದಾಳೆ! ಒಮ್ಮೆ ಹಾಡಿ ಆಕೆಯನ್ನು ಸಂತೋಷಗೊಳಿಸುತ್ತಾರೆ, ಮತ್ತೊಮ್ಮೆ ಇತರರಿಂದ ಹಾಡಿಸಿ ಸಂತುಷ್ಟರಾಗುತ್ತಾರೆ. ಸದಾನಂದಮಯಿಯಾದ ಜಗನ್ಮಾತೆಯ ಶಿಶುವಾಗಿ ಹೀಗೆ ಸದಾ ಆನಂದದ ಮೇಳವನ್ನೇ ಅವರು ನಡೆಸುತ್ತಿದ್ದರು; ಸಂಸಾರದಲ್ಲಿ ಬೆಂದು ಬಳಲಿದವರಿಗೆ ಶಾಂತಿ ಸಮಾಧಾನ ನೀಡಿ ಕ್ರಮೇಣ ಅವರನ್ನು ಮುಕ್ತಿಪಥಕ್ಕೆ ಒಯ್ಯುತ್ತಿದ್ದರು. ಗೃಹಸ್ಥರ ಅನೇಕ ಬಗೆಯ ಕಷ್ಟಕಾರ್ಪಣ್ಯಗಳನ್ನು ಕಂಡು ಅವರು ಹೀಗೆ ಪ್ರಾರ್ಥನೆ ಮಾಡುತ್ತಾರೆ: "ಅಮ್ಮಾ, ನೀನು ಆಗಾಗ ಅವರಿಗೆ ದರ್ಶನ ಕೊಡು. ಇಲ್ಲದಿದ್ದರೆ ಅವರು ಜೀವ ಹಿಡಿದುಕೊಂಡಿರುವುದಾದರೂ ಹೇಗೆ?"

## ಶ್ರೀಮಾತೆ ಶಾರದಾದೇವಿಯವರ 'ಕಾಳಿ'

ಶ್ರೀಮಾತೆ ಶಾರದಾದೇವಿಯವರೂ ಜಗನ್ಮಾತೆಯನ್ನು ಸರ್ವಭಾವದಲ್ಲೂ ಪೂಜಿಸಿದ ಸಾಧ್ವೀಮಣಿ. ತಮ್ಮ ದೇವಸದೃಶ ಪತಿಯೊಡನೆ ಕೂಡಿ ಬಾಳಲು ಅವರು ಜಯರಾಂಬಾಟಿಯಿಂದ ಬರುತ್ತಿದ್ದಾಗ, ದಾರಿಯಲ್ಲಿ ಅವರಿಗೆ ಜ್ವರ ಬಂದಿತು. ಇದರಿಂದ ಜೊತೆಯಲ್ಲಿದ್ದ ಅವರ ತಂದೆಗೆ ಆತಂಕವಾಯಿತು. ಆದರೆ ಶ್ರೀಮಾತೆಯವರು ಮಲಗಿ ನಿದ್ರಿಸುವಾಗ ಕಾಳೀದೇವಿ ಅವರ ಬಳಿಗೆ ಬಂದು ಅವರ ಮೈನೇವರಿಸಿ, "ನಿನಗೆ ಜ್ವರ ವಾಸಿಯಾಗುವುದು, ನಿನ್ನ ಪತಿಯ ದರ್ಶನ ಮಾಡುವೆ" ಎಂದು ಆಶ್ವಾಸನೆ ನೀಡುತ್ತಾಳೆ. ಅದರಂತೆಯೇ ಅವರ ಆರೋಗ್ಯ ಸುಧಾರಿಸಿ ಅವರು ದಕ್ಷಿಣೇಶ್ವರಕ್ಕೆ ಬಂದು ತಮ್ಮ ದಿವ್ಯಪತಿಯ ದರ್ಶನದಿಂದ ಆನಂದಿತರಾಗುತ್ತಾರೆ. ದಕ್ಷಿಣೇಶ್ವರದಲ್ಲಿ ಇದ್ದಾಗ ಶ್ರೀಮಾತೆಯವರು ಭವತಾರಿಣಿಗಾಗಿ ಹೂವಿನ ಮಾಲೆಯನ್ನು ಕಟ್ಟಿ ಕಳುಹಿಸುತ್ತಿದ್ದರು. ತಾವು ಹಾಗೂ ತಮ್ಮ ದಿವ್ಯಪತಿ ಈರ್ವರೂ ಜಗದಂಬೆಯ ದಾಸಿಯರೆಂದು ಭಾವಿಸುತ್ತಿದ್ದರು. ಶ್ರೀರಾಮಕೃಷ್ಣರಂತೆ ಜಗನ್ಮಾತೆಯನ್ನೇ ಸರ್ವರಲ್ಲೂ ಕಾಣುತ್ತಿದ್ದರು. ಆ ದೇವಭಾವದಲ್ಲೇ ಸೇವೆಯನ್ನು ಸಲ್ಲಿಸುತ್ತಿದ್ದರು. ಒಮ್ಮೆ ಶ್ರೀರಾಮಕೃಷ್ಣರು ಕಾಳೀಮಂದಿರದಿಂದ ಹೊರಬಂದವರು, ಜಗನ್ಮಾತೆಯ ಭಾವದಲ್ಲಿ ಸರಿಯಾಗಿ ಹೆಜ್ಜೆಯಿಡಲಾರದೆ ತಮ್ಮ ಕೋಣೆಗೆ ಬಂದು, "ಇದೇನು? ನಾನೇನು ಮದ್ಯ ಸೇವಿಸಿರುವೆನೇ?" ಎಂದು ಶ್ರೀಮಾತೆಯವರನ್ನು ಪ್ರಶ್ನಿಸಿದರು. ಆಗ ಶ್ರೀಮಾತೆ ಅವರನ್ನು

ಹೀಗೆ ಸಮಾಧಾನಪಡಿಸಿದರು: "ನೀವೇಕೆ ಮದ್ಯ ಸೇವಿಸುವಿರಿ, ನೀವು ಕಾಳೀನಾಮಾಮೃತದಿಂದ ಮತ್ತರಾಗಿರುವಿರಿ."

ಶ್ರೀಮಾತೆಯವರು ಭಗವತಿಯ ಇಚ್ಛೆಯೊಂದಿಗೆ ತಮ್ಮ ಇಚ್ಛೆಯನ್ನು ಪೂರ್ಣವಾಗಿ ಲಯಗೊಳಿಸಿದ ಕಾರಣ, ಲೋಕದ ವ್ಯವಹಾರವೆಲ್ಲಾ ಅವರಿಗೆ ಭಗವತಿಯ ಲೀಲೆಯಾಗಿಯೇ ಕಾಣುತ್ತಿತ್ತು. ಒಳಿತು ಕೆಡಕುಗಳನ್ನು ನಿರ್ವಿಕಾರ ಚಿತ್ತದಿಂದ, ಧೈರ್ಯದಿಂದ ಸ್ವೀಕರಿಸುವ ಅವರ ಮನೋಬಲ ಎಂಥವರನ್ನೂ ಮುಗ್ಧಗೊಳಿಸದಿರಲಾರದು. ಅವರ ದಿವ್ಯ ಜೀವನವನ್ನು ಅಧ್ಯಯನ ಮಾಡಿದವರಿಗೆ ಅವರ ಅಸಾಧಾರಣ ಸಹನೆ, ಪ್ರೀತಿ, ದೋಷಗಳನ್ನು ಕಾಣದಿರುವುದು, ನಿರಭಿಮಾನತೆ ಎಂಬ ಅನೇಕಾನೇಕ ದಿವ್ಯವಿಭೂತಿಗಳು ವ್ಯಕ್ತವಾಗುವುದನ್ನು ಕಾಣುತ್ತೇವೆ. ಸ್ವಯಂ ಭಗವತಿಯೇ ಅವರ ರೂಪದಿಂದ ನಡೆದಾಡುತ್ತಿದ್ದಳು ಎಂದು ಇದು ತೋರಿಸುತ್ತದೆ.

ಶ್ರೀರಾಮಕೃಷ್ಣರು ಇಹ ಜಗತ್ತಿನ ಲೀಲೆಯನ್ನು ಕೊನೆಗೊಳಿಸಿದಾಗ, ದುಃಖದಿಂದ ತುಂಬಿದ ಶ್ರೀಮಾತೆಯವರು, "ಅಮ್ಮಾ ಕಾಳೀ, ನನ್ನ ಯಾವ ಅಪರಾಧಕ್ಕೆ ನನ್ನನ್ನು ಬಿಟ್ಟು ಹೋದೆ." ಎಂದು ಉದ್ಗರಿಸುತ್ತಾರೆ. ನಿವೇದಿತಾ, ಕ್ರಿಸ್ಟಿನಾ ಮುಂತಾದ ಪಾಶ್ಚಾತ್ಯ ಮಹಿಳೆಯರು ಶ್ರೀಮಾತೆಯವರಿಗೆ, "ಅಮ್ಮಾ, ನೀವೇ ನಮ್ಮ ಕಾಳಿ" ಎಂದಾಗ, "ಅಬ್ಬಾ! ಅದಾಗದು, ಹಾಗಾದರೆ ನಾನು ಯಾವಾಗಲೂ ನಾಲಗೆ ಹೊರಗೆ ತೆಗೆದಿಟ್ಟುಕೊಂಡಿರಬೇಕು" ಎಂದು ತಮಾಷೆ ಮಾಡುತ್ತಾರೆ.

### ಸ್ವಾಮಿ ವಿವೇಕಾನಂದರ 'ತಾಯಿ'

ಸ್ವಾಮಿ ವಿವೇಕಾನಂದರ ಪೂರ್ವಾಶ್ರಮದ ಹೆಸರು ನರೇಂದ್ರನಾಥ. ನರೇಂದ್ರ ದಕ್ಷಿಣೇಶ್ವರಕ್ಕೆ ಬಂದು ಶ್ರೀರಾಮಕೃಷ್ಣರ ದರ್ಶನ ಮಾಡುತ್ತಿದ್ದ. ಶ್ರೀರಾಮಕೃಷ್ಣರು ಜಗನ್ಮಾತೆ ಕಾಳಿಯನ್ನು ಪೂಜಿಸುವುದನ್ನು ಕಂಡು ಅವನು ತಮಾಷೆ ಮಾಡುತ್ತಿದ್ದ. ಅವನು ಬ್ರಾಹ್ಮಸಮಾಜದ ಅನುಯಾಯಿಯಾಗಿದ್ದ. ಆದರೆ ನರೇಂದ್ರನ ತಂದೆ ದೇಹತ್ಯಾಗ ಮಾಡಿದಾಗ ಅವನು ಅನೇಕ ಕಷ್ಟಕಾರ್ಪಣ್ಯಗಳನ್ನು ಎದುರಿಸಬೇಕಾಯಿತು. ಮನೆಯಲ್ಲಿ ಆತನ ತಾಯಿ, ಅಕ್ಕ, ತಮ್ಮಂದಿರಿಗೆ ಊಟಕ್ಕೂ ಗತಿಯಿಲ್ಲದಾಯಿತು.

ಆಗ ಒಂದು ದಿನ ಶ್ರೀರಾಮಕೃಷ್ಣರಿಗೆ ನಮಸ್ಕರಿಸಿ ನರೇಂದ್ರ ಹೇಳುತ್ತಾನೆ, "ನಿಮ್ಮ ಮಾತು ಜಗನ್ಮಾತೆ ಕೇಳುತ್ತಾಳೆ. ಆದ್ದರಿಂದ ನಮ್ಮ ಮನೆಯ ಬಡತನ ನಿವಾರಣೆಗಾಗಿ ಪ್ರಾರ್ಥನೆ ಮಾಡಿರಿ." ಆಗ ಶ್ರೀರಾಮಕೃಷ್ಣರು, "ನೋಡಪ್ಪಾ, ನೀನು ತಾಯಿಯನ್ನು ನಂಬುವುದಿಲ್ಲ. ಆದ್ದರಿಂದಲೇ ಇಷ್ಟು ಕಷ್ಟ. ಹೋಗು, ಈ ದಿನ ಮಂಗಳವಾರ, "ನೀನೇ ಹೋಗಿ ತಾಯಿಯಲ್ಲಿ ಪ್ರಾರ್ಥನೆ ಮಾಡು" ಎಂದರು. ನರೇಂದ್ರನು ದೇವಿ ಭವತಾರಿಣಿಯ ಮುಂದೆ ನಿಂತು ಆಕೆಯ ದಿವ್ಯದರ್ಶನದಿಂದ ಪುಳಕಿತನಾಗಿ, ಕೇವಲ ಜ್ಞಾನ, ಭಕ್ತಿ, ವಿವೇಕ, ವೈರಾಗ್ಯಗಳನ್ನಷ್ಟೇ ಬೇಡುತ್ತಾನೆ. ತನ್ನ ಕಷ್ಟಗಳ ನಿವಾರಣೆಗಾಗಿ ಬೇಡಲೇ ಇಲ್ಲ. ಮೂರು ಬಾರಿ ಹೋದಾಗಲೂ ಜ್ಞಾನ, ಭಕ್ತಿ, ವಿವೇಕ, ವೈರಾಗ್ಯಗಳನ್ನೇ ಬೇಡಿದನೇ ವಿನಾ ತನ್ನ ಮನೆಯವರ ಕಷ್ಟವನ್ನು ಹೇಳಿಕೊಳ್ಳಲಿಲ್ಲ. ಕಡೆಗೆ ಶ್ರೀರಾಮಕೃಷ್ಣರೇ ಅವನಿಗೆ ಆಶೀರ್ವಾದ ಮಾಡಿ ಕಳುಹಿಸುತ್ತಾರೆ. ಆ ದಿನ ನರೇಂದ್ರ ಕಾಳಿಯ ಮೇಲೆ ಹಲವಾರು ಹಾಡುಗಳನ್ನು ಹಾಡಿದ. ಶ್ರೀರಾಮಕೃಷ್ಣರು ಬಂದವರ ಬಳಿಯಲ್ಲೆಲ್ಲಾ, "ನೋಡಿ, ನರೇನ್ ಕಾಳಿಯನ್ನು ಸ್ವೀಕರಿಸಿದ" ಎಂದು ಸಂತೋಷ ವ್ಯಕ್ತಪಡಿಸಿದರು.

ಸದಾ ಕರ್ಮನಿರತರಾದ ಸ್ವಾಮಿ ವಿವೇಕಾನಂದರಿಗೆ ಅರೆಗಳಿಗೆಯೂ ವಿಶ್ರಾಂತಿ ಪಡೆಯಲಾಗುತ್ತಿರಲಿಲ್ಲ. ಓರ್ವ ಭಕ್ತ, "ಈ ರೀತಿ ಏಕೆ ವಿಶ್ರಾಂತಿ ಇಲ್ಲದೆ ದುಡಿಯುವಿರಿ?" ಎಂದು ಪ್ರಶ್ನಿಸಿದಾಗ "ನೋಡಪ್ಪಾ, ಶ್ರೀರಾಮಕೃಷ್ಣರು ಯಾರನ್ನು ಕಾಳೀ ಕಾಳೀ ಎನ್ನುತ್ತಿದ್ದರೋ ಆಕೆಯನ್ನು ನನ್ನ ಮೇಲೆ ಬಿಟ್ಟು ಹೋಗಿದ್ದಾರೆ. ನಾನು ಸದಾ ಕರ್ಮತತ್ಪರನಾಗಿರುವಂತೆ ಆಕೆ ಮಾಡುತ್ತಾಳೆ" ಎಂದರು.

ಅವರ **"ಕಾಲಿ ದಿ ಮದರ್"** ಎಂಬ ಕವಿತೆ ಅತ್ಯಂತ ಉನ್ನತ ಮಟ್ಟದ್ದು. ಕಡೆಗೆ ಅವರು, ಕಾಶ್ಮೀರದ ಕ್ಷೀರಭವಾನಿಯಲ್ಲಿ ಜಗನ್ಮಾತೆಯ ಸಾಕ್ಷಾತ್ ದರ್ಶನ ಪಡೆದರು; ಕರ್ಮವೆಲ್ಲವೂ ಆಕೆಯದೇ, ತಾನು ಕೇವಲ ಆಕೆಯ ಶಿಶು ಎಂಬ ಭಾವವನ್ನು ಪಡೆದರು.

### ಪ್ರತ್ಯಕ್ಷಶಿಷ್ಯರು ಕಂಡಂತೆ 'ಜಗನ್ಮಾತೆ'

ಸ್ವಾಮಿ ಬ್ರಹ್ಮಾನಂದರು ರಾಮಕೃಷ್ಣ ಮಹಾಸಂಘದ ಪ್ರಥಮ ಅಧ್ಯಕ್ಷರು. ಇವರು ಶ್ರೀರಾಮಕೃಷ್ಣರ ಮಾನಸಪುತ್ರರು ಹಾಗೂ ಅತ್ಯಂತ ಉಚ್ಚಮಟ್ಟದ ಆಧ್ಯಾತ್ಮಿಕ ಜ್ಞಾನಸಂಪನ್ನರು, ಜೀವನ್ಮುಕ್ತರು ಮತ್ತು ನಿತ್ಯಸಿದ್ಧರು.

ರಾಖಾಲ (ಬ್ರಹ್ಮಾನಂದರ ಹಿಂದಿನ ಹೆಸರು) ದಕ್ಷಿಣೇಶ್ವರದಲ್ಲಿದ್ದಾಗ ಕಾಳೀಮಂದಿರದಲ್ಲಿ ಕುಳಿತು ದೀರ್ಘಕಾಲ ಧ್ಯಾನಾಸಕ್ತನಾಗುತ್ತಿದ್ದ; ಉಚ್ಚಮಟ್ಟದ ಅನುಭವಗಳನ್ನು ಪಡೆಯುತ್ತಿದ್ದ. ಶ್ರೀರಾಮಕೃಷ್ಣರು ರಾಖಾಲನನ್ನು ತಮ್ಮ ನಿತ್ಯಸಂಗಾತಿಯಾಗಿ ಪಡೆಯಲು ಜಗನ್ಮಾತೆಯ ಬಳಿ ಕಣ್ಣೀರಿಟ್ಟು ಹೀಗೆ ಪ್ರಾರ್ಥಿಸುತ್ತಿದ್ದರು: "ಅಮ್ಮಾ, ನಾನು ರಾಖಾಲನನ್ನು ನೋಡದೆ ಇರಲಾರೆ. ಬೇಗ ಆತನನ್ನು ಇಲ್ಲಿಗೆ ಕರೆದು ತಾ." ಅವರ ಮೊರೆಯನ್ನು ಆಲಿಸಿ ಜಗನ್ಮಾತೆ ರಾಖಾಲನನ್ನು ಶ್ರೀರಾಮಕೃಷ್ಣರ ಜೊತೆಯಲ್ಲಿ ಸದಾ ಇರುವಂತೆ ಮಾಡಿದಳು.

ಮುಂದೆ ಸ್ವಾಮಿ ಬ್ರಹ್ಮಾನಂದರು ರಾಮಕೃಷ್ಣಮಠದ ಪರಮಾಧ್ಯಕ್ಷರಾಗಿದ್ದಾಗ ಒಮ್ಮೆ ಶ್ರೀಮಾತೆ ಶಾರದಾದೇವಿಯವರನ್ನು ದರ್ಶಿಸಲು ಉದ್ಬೋಧನದ ಮನೆಗೆ ಬಂದರು. ಶ್ರೀಮಾತೆಯವರು ಗೋಲಾಪ್ ಮಾಳ ಮೂಲಕ ಬ್ರಹ್ಮಾನಂದರಿಗೆ ಒಂದು ಪ್ರಶ್ನೆ ಕಳಿಸಿದರು. ಗೋಲಾಪ್ ಮಾ ಬ್ರಹ್ಮಾನಂದರ ಬಳಿಗೆ ಬಂದು ಕೇಳುತ್ತಾಳೆ, "ರಾಖಾಲ್, ಶ್ರೀಮಾತೆಯವರು ಕೇಳುತ್ತಿದ್ದಾರೆ, ಸಾಧಕ ಪ್ರಪ್ರಥಮವಾಗಿ ಜಗನ್ಮಾತೆಯ ಪೂಜೆ ಏಕೆ ಮಾಡಬೇಕು?" ಅದಕ್ಕೆ ಬ್ರಹ್ಮಾನಂದರು "ಜಗನ್ಮಾತೆಯ ಕೈಯಲ್ಲಿಯೇ ಮುಕ್ತಿಯ ಬೀಗದ

ಕೈ ಇದೆ. ಆಕೆ ಪ್ರಸನ್ನಳಾಗಿ ಮುಕ್ತಿಯ ಬಾಗಿಲು ತೆಗೆಯಬೇಕು. ಆದ್ದರಿಂದಲೇ ಪ್ರಪ್ರಥಮವಾಗಿ ಆಕೆಯನ್ನು ಪೂಜಿಸಬೇಕು" ಎಂದು ಹೇಳುತ್ತಾರೆ; ಜಗನ್ಮಾತೆಯ ಕುರಿತಾಗಿ ಒಂದು ಹಾಡು ಹೇಳುತ್ತಾ ಆನಂದದಿಂದ ನರ್ತನ ಮಾಡುತ್ತಾ ಹೊರಟು ಹೋಗುತ್ತಾರೆ. ಬೇಲೂರು ಮಠ ಪ್ರಾರಂಭವಾದ ದಿನಗಳಲ್ಲಿ ಬ್ರಹ್ಮಾನಂದರು ಗಂಗಾನದಿಯಿಂದ ಶ್ರೀದುರ್ಗಾಮಾತೆ ಮಠದ ಬಳಿಗೆ ನಡೆದು ಬಂದಿದ್ದನ್ನು ಕಂಡರು. ಇದೇ ರೀತಿಯ ದರ್ಶನ ಸ್ವಾಮಿ ವಿವೇಕಾನಂದರಿಗೂ ಆಯಿತು. ಅಂದಿನಿಂದಲೇ ಪ್ರತಿ ವರ್ಷ ಬೇಲೂರು ಮಠದಲ್ಲಿ ದುರ್ಗಾಪೂಜೆಯನ್ನು ವೈಭವದಿಂದ ಆಚರಿಸಲಾಗುತ್ತಿದೆ.

ದಕ್ಷಿಣಭಾರತಕ್ಕೆ ಸ್ವಾಮಿ ಬ್ರಹ್ಮಾನಂದರು ಭೇಟಿಯಿತ್ತಾಗ ಮಧುರೆ ಮೀನಾಕ್ಷಿದೇವಿಯ ದೇವಸ್ಥಾನಕ್ಕೆ ಹೋಗಿದ್ದರು. ಇನ್ನೂ ಗರ್ಭಗುಡಿಯ ಹತ್ತಿರ ಹೋಗುತ್ತಿರುವಾಗಲೇ ದೇವಿ ಮೀನಾಕ್ಷಿ ಇವರೆಡೆಗೆ ಬಂದಂತೆ ದರ್ಶನವಾಯಿತು. ಇದರಿಂದ ಅವರಿಗೆ ಭಾವಾವಸ್ಥೆ ಬಂದಿತು. ತಿರುಪತಿಗೆ ಹೋದಾಗ ಅಲ್ಲಿ ಅವರಿಗೆ ಬಾಲಾಜಿ ಕಾಣಲಿಲ್ಲ; ಬಾಲಾ ತ್ರಿಪುರಸುಂದರಿಯ ದರ್ಶನ ಆಯಿತು. ಅಲ್ಲಿನ ಸ್ಥಳಪುರಾಣ ಓದಿ ನೋಡಿದಾಗ ಮೊದಲು ಆ ಮೂರ್ತಿಯನ್ನು ದೇವಿಯೆಂದೇ ಪೂಜಿಸುತ್ತಿದ್ದರೆಂದು ತಿಳಿದುಬರುತ್ತದೆ.

ರಾಮಕೃಷ್ಣ ಮಹಾಸಂಘದ ದ್ವಿತೀಯ ಅಧ್ಯಕ್ಷರಾದ ಸ್ವಾಮಿ ಶಿವಾನಂದರು ಗಂಭೀರ ಪ್ರಕೃತಿಯವರು. ತೀವ್ರ ವೈರಾಗ್ಯಸಂಪನ್ನರು, ಶ್ರೀಗುರುವಿನಲ್ಲಿ, ಜಗದಂಬೆಯಲ್ಲಿ ಸಂಪೂರ್ಣ ಶರಣಾಗತಿಯನ್ನು ಹೊಂದಿ ಆಧ್ಯಾತ್ಮಿಕ ಜಗತ್ತಿನ ಬಹು ದೊಡ್ಡ ಧ್ರುವತಾರೆಯಾಗಿ ಬೆಳಗಿದವರು. ಅವರ ಸುದೀರ್ಘ ಅಧ್ಯಕ್ಷತೆಯಲ್ಲಿ ಬೇಲೂರು ಮಠ ಆನಂದದ ನಿಕೇತನವಾಗಿತ್ತು. ವಿಶೇಷವಾಗಿ ದುರ್ಗಾಪೂಜೆಯ ಸಮಯದಲ್ಲಿ ಜಗನ್ಮಾತೆಯ ಪ್ರತ್ಯಕ್ಷ ಇರುವಿಕೆಯ ಅನುಭೂತಿ ಅವರಿಗೆ ಆಗುತ್ತಿತ್ತು. ಸ್ವಾಮಿ ಶಿವಾನಂದರ ಪ್ರೇಮಪೂರ್ಣ ಹೃದಯ, ಆಧ್ಯಾತ್ಮಿಕ ಶಕ್ತಿ, ಮಠದ ಸಂಚಾಲನೆ, ಸಾಧು ಬ್ರಹ್ಮಚಾರಿಗಳೊಂದಿಗೆ ಸಮಾನಭಾವ ಮುಂತಾದ ಅನೇಕ ಕಲ್ಯಾಣಗುಣಗಳು ಅವರಿಗೆ ಜಗದಂಬೆಯ ಕೃಪೆಯಿಂದಲೇ ಉಂಟಾಗಿತ್ತು.

ಬೆಂಗಳೂರಿನಲ್ಲಿ ಶ್ರೀಮಾತೆಯವರು ಮೂರು ದಿನಗಳ ಕಾಲ ವಾಸ ಮಾಡಿದರು. ಒಂದು ದಿನ ಅವರು ಅಲ್ಲಿದ್ದ ಕಲ್ಲುಗುಡ್ಡದ ಮೇಲೆ ಹತ್ತಿ ಧ್ಯಾನಸ್ಥರಾಗಿದ್ದಾಗ, ಸ್ವಾಮಿ ರಾಮಕೃಷ್ಣಾನಂದರು ಅತ್ಯಂತ ಆನಂದದಿಂದ "ಆಹಾ! ತಾಯಿ ಪರ್ವತವಾಸಿನಿಯಾಗಿರುವರೇ?" ಎಂದು ಉದ್ಗರಿಸಿ, ತಾವೂ ಅಲ್ಲಿಗೆ ಹೋಗಿ ಶ್ರೀಮಾತೆ ಶಾರದಾದೇವಿಯವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, **ಸರ್ವಮಂಗಲಮಾಂಗಲ್ಯೇ ಶಿವೇ ಸರ್ವಾರ್ಥಸಾಧಿಕೇ, ಶರಣ್ಯೇ ತ್ರ್ಯಂಬಕೇ ಗೌರಿ ನಾರಾಯಣಿ ನಮೋಸ್ತು ತೇ** ಎಂದು ಸ್ತುತಿಸುತ್ತಾ, ಜಗನ್ಮಾತೆಯು ಅಲ್ಲಿ ಎಂದಿಗೂ ಸೂಕ್ಷ್ಮರೂಪದಲ್ಲಿ ನೆಲೆಸುವಂತೆ ಪ್ರಾರ್ಥಿಸಿದರು.

ಸ್ವಾಮಿ ಶಾರದಾನಂದರು ಮೊದಲು ಶ್ರೀರಾಮಕೃಷ್ಣರ ಸಾನ್ನಿಧ್ಯಕ್ಕೆ ಬಂದು ಅವರನ್ನು ಸಾಕ್ಷಾತ್ ಜಗದಂಬೆಯಂತೆ ಕಂಡರು. ಮುಂದೆ **ಜೀವಂತ ದುರ್ಗಾ** ಎಂದು ಕರೆಯಿಸಿಕೊಂಡಂಥ ಶ್ರೀಮಾತೆಯವರನ್ನು ಸರ್ವರೀತಿಯಲ್ಲೂ ಸೇವಿಸಿ, ಪೂಜಿಸಿ ಧನ್ಯರಾದರು. ಶ್ರೀಮಾತೆಯವರು ಹೇಳುತ್ತಿದ್ದರು, "ಶರತ್ ಎಲ್ಲರಲ್ಲೂ ಜಗದಂಬೆಯನ್ನು ಕಾಣುತ್ತಾನೆ. ಅಷ್ಟೇ ಅಲ್ಲ. ಪುರುಷರಲ್ಲಿ ಶ್ರೀರಾಮಕೃಷ್ಣರನ್ನೂ ಸ್ತ್ರೀಯರಲ್ಲಿ ನನ್ನನ್ನೂ ಕಾಣುತ್ತಾನೆ." ಸ್ವಾಮಿ ಶಾರದಾನಂದರು, **ಭಾರತದಲ್ಲಿ ಶಕ್ತಿಪೂಜೆ** ಎಂಬ ಪುಸ್ತಕ ಬರೆದು "ಯಾರ ಕೃಪೆಯಿಂದ ನಾನು ಎಲ್ಲ ನಾರಿಯರಲ್ಲೂ ಜಗದಂಬೆಯನ್ನು ಕಾಣುತ್ತಿರುವೆನೊ ಅವರ ಶ್ರೀಚರಣಕ್ಕೆ ಸಮರ್ಪಿತ" ಎಂದು ಶ್ರೀಮಾತೆಯವರ ಚರಣಕ್ಕೆ ಅದನ್ನು ಸಮರ್ಪಿಸಿದ್ದಾರೆ.

ಸ್ವಾಮಿ ಅಭೇದಾನಂದರು ರಚಿಸಿರುವಂತಹ **ಪ್ರಕೃತಿಂ ಪರಮಾಂ ಅಭಯಾಂ ವರದಾಂ** ಎಂಬ 'ಶಾರದಾಸ್ತುತಿ' ಶ್ರೀಶಾರದಾದೇವಿಯವರನ್ನು ಕುರಿತು ರಚಿಸಿರುವುದಾದರೂ ಅದರಲ್ಲಿ ಪರಮಾಪ್ರಕೃತಿಯಾದ ಜಗನ್ಮಾತೆಯ ಸ್ತುತಿ ಪ್ರಶಂಸೆಯೇ ಹೆಚ್ಚಾಗಿದೆ. ಇದರಿಂದ, ಜಗನ್ಮಾತೆಯಲ್ಲಿ ಅವರಿಗೆ ಎಂತಹ ಶ್ರದ್ಧೆ ವಿಶ್ವಾಸಗಳು ಇತ್ತೆಂದು ಗೊತ್ತಾಗುತ್ತದೆ. ಇದು ಬಹು ಪ್ರಖ್ಯಾತವಾದ ದೇವೀಸ್ತುತಿಯಾಗಿದೆ.

ಸ್ವಾಮಿ ತುರೀಯಾನಂದರು ಅಮೆರಿಕದಲ್ಲಿ ಶಾಂತಿ ಆಶ್ರಮದಲ್ಲಿ ನೆಲೆಸಿರುವಾಗ ಸ್ವಾಮಿ ವಿವೇಕಾನಂದರ ದರ್ಶನ ಪಡೆಯುವ ಉತ್ಸುಕತೆಯಿಂದ ಭಾರತಕ್ಕೆ ಮರಳಬೇಕು ಎಂದು ನಿರ್ಧಾರ ಮಾಡಿಕೊಂಡ ಸಮಯದಲ್ಲಿ, ಜಗನ್ಮಾತೆ ಅವರಿಗೆ ದರ್ಶನವಿತ್ತು ಭಾರತಕ್ಕೆ ಹೋಗುವುದು ಬೇಡವೆಂದೂ ಅಲ್ಲಿಯೇ ಸೇವಾಕಾರ್ಯ ಮುಂದುವರೆಸಬೇಕೆಂದೂ ಸಲಹೆ ಕೊಡುತ್ತಾಳೆ. ಆದರೆ ಸ್ವಾಮಿ ತುರೀಯಾನಂದರು ಅದಕ್ಕೆ ಒಪ್ಪದೆ ಭಾರತಕ್ಕೆ ಮರಳಿದಾಗ ಮಧ್ಯದಲ್ಲಿಯೇ ಸ್ವಾಮಿ ವಿವೇಕಾನಂದರ ನಿರ್ಯಾಣದ ಸುದ್ದಿ ತಿಳಿದು ಬಹು ದುಃಖಿತರಾಗುತ್ತಾರೆ. ಇದರಿಂದ ಅವರು ಜಗದಂಬೆಯ ಬಳಿ ಎಷ್ಟು ನಿಕಟರಾಗಿದ್ದರು ಎಂದು ನಮಗೆ ಅರಿವಾಗುತ್ತದೆ.

ಸ್ವಾಮಿ ಪ್ರೇಮಾನಂದರು ತಮ್ಮ ಗುರು ಶ್ರೀರಾಮಕೃಷ್ಣರು ಹಾಗೂ ಶ್ರೀಮಾತೆಯವರಲ್ಲಿ ಜಗದಂಬೆಯ ಪ್ರತ್ಯಕ್ಷ ಸಾನ್ನಿಧ್ಯವನ್ನು ಅನುಭವಿಸಿದ ಮಹಾನುಭಾವರು. ಶ್ರೀಶಾರದಾದೇವಿಯವರ ಅಪಾರ ಕರುಣೆಯನ್ನು ಕಂಡು, "ಆಹಾ, ಸಾಮಾನ್ಯ ಸ್ತ್ರೀಯಂತೆ ಶ್ರೀಮಾತೆ ಕಂಡರೂ, ಅವರು ಎಂತಹ ಮಹಾಶಕ್ತಿಯ ಅಧಿಕಾರಿಣಿಯಾಗಿದ್ದಾರೆ! ಆದರೆ ಅದನ್ನೆಲ್ಲಾ ಗೋಪ್ಯವಾಗಿ ಇಡುತ್ತಾರೆ! ಎಂತಹ ಶಕ್ತಿ! ಜೈ ಮಾ, ಜೈ ಮಾ, ಜಯ ಜಗಜ್ಜನನಿ" ಎಂದು ಉದ್ಗಾರ ಮಾಡುತ್ತಿದ್ದರು.

ಸ್ವಾಮಿ ಅದ್ಭುತಾನಂದರು, ಯೋಗಾನಂದರು, ಸುಬೋಧಾನಂದರು, ಅದ್ವೈತಾನಂದರು ಮೊದಲಾದ ಪ್ರತ್ಯಕ್ಷಶಿಷ್ಯರು ಸ್ವಯಂ ಭಗವಾನ್ ಶ್ರೀರಾಮಕೃಷ್ಣರನ್ನು, ಶಾರದಾದೇವಿಯವರನ್ನು ಜಗದಂಬೆ ಎಂದು ಸಾಕ್ಷಾತ್ಕರಿಸಿಕೊಂಡು ಹೃತ್ಪೂರ್ವಕವಾಗಿ ಅವರ ಸೇವೆ ಮಾಡಿ ಧನ್ಯರಾದರು. **ಅಂಥ ಜಗನ್ಮಾತೆಗೆ ನಮಸ್ಕಾರಗಳು!**